ಅಂದು ಸಂಜೆ ಕೆಲಸದ ರಂಗಮ್ಮ ಗುಡಿಯಲ್ಲಿ ಪೂಜೆ ಮಾಡಿಸಿ ಹಣ್ಣುಕಾಯಿಯ ಪ್ರಸಾದ ತಂದು ಅವಳ ಕೈಗಿತ್ತಳು. ''ಅಮ್ಮಾವ್ರೆ, ಇಕಳ್ಳಿ ಪ್ರಸಾದ. ನೀವು ಬ್ಯಾನೆ ಬಿದ್ದದ್ ನೋಡಿ ದೊಡ್ಡಮ್ಮಾವ್ರು ಶಾನೆ ದಿಗಿಲು ಬಿದ್ದೋದ್ರು. ನನ್ನತ್ರ ಕಾಸುಕೊಟ್ಟು ನಿಮ್ಮ ಎಸ್ರಿನಾಗೆ ಪೂಜೆ ಮಾಡಿಸ್ಕಂಡ್ ಬಾ ಅಂದಿದ್ರು.'' ವಾಣಿಗೆ ಅತ್ತೆಯ ಅಂತಃಕರಣ ಕಂಡು ಕಣ್ತುಂಬಿ ಬಂತು. ತನ್ನಮೇಲೆ ಅವರಿಗೆಷ್ಟು ಪ್ರೀತಿ. ತಾನೇ ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಿಲ್ಲವೇ?

''ರಂಗಮ್ಮಾ ನೋಡಿದ್ಯಾ ಅವರಿಗೆ ನನ್ಮೇಲೆಷ್ಟು ಪ್ರೀತಿ ಅಂತ. ಒಂದೊಂದುಸಲ ಅರುಳುಮರುಳು ಆವರಿಸಿದಾಗ ಹೇಗ್ಹೇಗೋ ಆಡ್ತಾರೆ ಅಷ್ಟೆ. ಮಿಕ್ಕ ವೇಳೆ ಹೆತ್ತ ತಾಯಿ ಥರ ವಾತ್ಸಲ್ಯ ತೋರಿಸ್ತಾರೆ.'' ರಂಗಮ್ಮ ತನ್ನ ಸೆರಗನ್ನು ಬಾಯಿಗಡ್ಡವಿಟ್ಟು ಮೈ ಕುಲಿಕಿಸಿ ನಕ್ಕಳು. ''ಅಮ್ಮಾವ್ರೆ, ಅದು ಪ್ರೀತಿಯಲ್ಲ. ನೀವು ಕಾಯ್ಲೆ ಬಿದ್ರೆ ತನ್ನನ್ನ ನೋಡ್ಕೊಳ್ಳೋರು ಯಾರು ಅನ್ನೊ ಭಯ ಅಷ್ಟೇಯ.'' ಕಡ್ಡಿ ತುಂಡು ಮಾಡಿದಂತೆ ವ್ಯಾಖ್ಯಾನಿಸಿಬಿಟ್ಟಳು!

★★★

ವಾಣಿಗೆ ಈಚೆಗೆ ಪದೇಪದೇ ಆರೋಗ್ಯ ಕೆಡುತ್ತಿತ್ತು. ತಪಾಸಣೆ ನಡೆಸಿದ ವೈದ್ಯರು ವಿಶ್ರಾಂತಿಯ ಅವಶ್ಯಕತೆಯನ್ನು ಎತ್ತಿಹಿಡಿದರು. ಹರಿ ಬೇರೆ ದಾರಿ ಕಾಣದೆ ತಮ್ಮನಿಗೆ ಫೋನ್ ಮಾಡಿ ಪರಿಸ್ಥಿತಿ ವಿವರಿಸಿ ತನಗೆ ತೋಚಿದ ಒಂದೇಒಂದು ಪರಿಹಾರವನ್ನು ಸೂಚಿಸಿದ.

''ಅಣ್ಣ, ನೀನು ತಮಾಷೆ ಮಾಡ್ತಿಲ್ಲ ತಾನೇ? ಅಮ್ಮನನ್ನ ಈ ವಯಸ್ನಲ್ಲಿ ಈ ದೇಶಕ್ಕೆ ಕರ್ಕೊಂಡು ಬರೋದಾ? ನಿನಗಿಲ್ಲಿನ ಪರಿಸ್ಥಿತಿ ಗೊತ್ತಿಲ್ಲಾಂತ ಕಾಣತ್ತೆ. ಅದಕ್ಕೇ ಆರುತಿಂಗ್ಳಾದ್ರೂ ಅಮ್ಮನ್ನ ಕರ್ಕೊಂಡು ಹೋಗು ಅಂತಿದ್ದಿ. ನಾನೂ ನನ್ನ ಹೆಂಡ್ತಿ ಬೆಳಿಗ್ಗೆ ಮನೆ ಬಿಟ್ರೆ ರಾತ್ರೆನೇ ತಿರುಗಿ ಬರೋದು. ಇಲ್ಲಿ ನೆರೆ ಹೊರೆ, ಅಕ್ಕ ಪಕ್ಕ ಅಂತಿದ್ರೂ ಏನೇನೂ ಪ್ರಯೋಜ್ನ ಇಲ್ಲ. ಎಲ್ರಿಗೂ ಅವ್ರವ್ರ ಕೆಲ್ಸ ಅವ್ರವ್ರ ಜೀವನವಷ್ಟೇ. ಅಮ್ಮ ಇಡೀ ದಿನ ಮನುಷ್ಯ ಸಂಪರ್ಕವಿಲ್ದೆ ಹೇಗಿರ್ತಾಳೆ? ನನ್ನ ಹೆಂಡ್ತಿ ವಾರಕ್ಕೊಮ್ಮೆ ಅಡುಗೆ ಮಾಡ್ತಾಳೆ. ಮಿಕ್ಕ ಆರು ದಿನಗಳು ತಂಗಳು ತಿಂತೀವಿ. ಅಮ್ಮನಿಗೆ ಅತ್ತಿಗೆ ಮಾಡಿಹಾಕೋ ಬಿಸಿ ಅಡುಗೆ ತಿಂದು ಅಭ್ಯಾಸ ಆಗಿ ಇಲ್ಲಿ ಹೊಂದ್ಕೋತಾಳ ಹೇಳು? ಅತ್ತಿಗೆಯ ಉಪಚಾರ ಅಮ್ಮನಿಗೆ ಒಗ್ಗಿಹೋಗಿದೆ. ಅಲ್ಲೇ ಇರ್ಲಿ ಬಿಡು. ಅತ್ತಿಗೆಗೆ ವಿಶ್ರಾಂತಿ ಬೇಕಿದ್ರೆ ಯಾರಾದ್ರು ಅಡುಗೆಯವ್ರನ್ನು ನೋಡು. ಅಮ್ಮನ ಶುಶ್ರೂಷೆಗೆ ಪ್ರತ್ಯೇಕವಾಗಿ ಆಯಾನ ಗೊತ್ತು ಮಾಡು. ಅದೆರಡಕ್ಕಾಗೋ ಹಣವನ್ನ ನಾನು ನಿನ್ನ ಬ್ಯಾಂಕ್ ಖಾತೆಗೆ ತಿಂಗ್ಳ ತಿಂಗ್ಳೂ ಜಮಾ ಮಾಡ್ತೀನಿ. ಅತ್ತಿಗೇನ ಒಳ್ಳೆ ಡಾಕ್ಟರಿಗೆ ತೋರ್ಸಿ ಚಿಕಿತ್ಸೆ ಕೊಡಿಸು'' ಹೇಳಿ ಕಾಲ್ ಕಟ್ ಮಾಡಿದ.

ವಾಗ್ದೇವಿಯದೂ ಅದೇ ಹಳೇ ರಾಗವೇ. ಹಳೇ ಪಲ್ಲವಿಯ ಜೊತೆ ಒಂದು ಹೊಸ ಅನುಪಲ್ಲವಿಯನ್ನು ಜೋಡಿಸಿದಳು. ''ನನಗೆ ತಿಳಿದ ಟ್ರಸ್ಟ್‌ನವರು ಬೆಂಗಳೂರಿನಲ್ಲಿ ಹೊಸದೊಂದು ವೃದ್ಧಾಶ್ರಮ ಆರಂಭಿಸಿದ್ದಾರೆ. ಅಲ್ಲಿ ಎಲ್ರನ್ನು ಬಹಳ ಚೆನ್ನಾಗಿ ನೋಡ್ಕೊಳ್ತಾರಂತೆ. ಎಲ್ಲಾ ಅನುಕೂಲಗಳೂ ಇವೆಯಂತೆ. ಸ್ವಲ್ಪ ದುಬಾರಿಯೆನಿಸಿದರೂ ಪರವಾಗಿಲ್ಲ. ನಾವು ಮೂರೂ ಮಂದಿ ಖರ್ಚನ್ನು ಹಂಚಿಕೊಳ್ಳೋಣ. ನೀ ಹೇಗಾದ್ರೂ ಅಮ್ಮನನ್ನು ಒಪ್ಪಿಸು. ನಾನು ಟ್ರಸ್ಟ್‌ನವರ ಜೊತೆ ಮಾತಾಡ್ತೀನಿ'' ಎಂದಳು.

ಎಲ್ಲಾ ಸಂಭಾಷಣೆಯನ್ನು ಸ್ಪೀಕರಿನಲ್ಲಿ ಕೇಳಿಸಿಕೊಳ್ಳುತ್ತಿದ್ದ ವಾಣಿಯ ಮನಸ್ಸಿನಲ್ಲಿ ತುಮುಲವೆದ್ದಿತು. ಇಷ್ಟು ವರ್ಷಗಳು ಈ ಹಿರಿಯ ಜೀವವನ್ನು ಜೋಪಾನಮಾಡಿದ್ದ ತನಗೆ ವಿರಾಮವೇ ಬೇಡವೇ? ತನ್ನ ಅತ್ತೆ ಜನ್ಮಕೊಟ್ಟಿದ್ದು ಮೂರುಮಕ್ಕಳಿಗೆ. ಎಲ್ಲರಿಗೂ ಅವರನ್ನು